ಒಂದನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.

**15 ನೇ ಜೂನ, 2024**

**ಸಿ. ಸಿ. ನಂ. 4177 /2023**

| | |
|---|---|
| ದೂರುದಾರರು- | ರಾಜ್ಯದ ಪರವಾಗಿ ಸದಲಗಾ ಪೊಲೀಸ್ ಠಾಣೆ, ಸದಲಗಾ |
| ವಿರುದ್ಧ | |
| ಆಪಾಧಿತರು- | 1. ಶಂಕರ ಈಶ್ವರ ಯಕ್ಸಂಬೆ,<br>ವಯಸ್ಸುಃ 63 ವರ್ಷ, ಉಃ ಒಕ್ಕಲುತನ,<br>ವಾಸಃ ನನದಿವಾಡಿ, ತಾಃ ಚಿಕ್ಕೋಡಿ.<br><br>2. ಅರ್ಜುನ ಈಶ್ವರ ಯಕ್ಸಂಬೆ,<br>ವಯಸ್ಸುಃ 51 ವರ್ಷ, ಉಃ ಒಕ್ಕಲುತನ,<br>ವಾಸಃ ನನದಿವಾಡಿ, ತಾಃ ಚಿಕ್ಕೋಡಿ,<br><br>3. ನಿತೀನ ಶಂಕರ ಯಕ್ಸಂಬೆ,<br>ವಯಸ್ಸುಃ 33 ವರ್ಷ, ಉಃ ಒಕ್ಕಲುತನ,<br>ವಾಸಃ ನನದಿವಾಡಿ, ತಾಃ ಚಿಕ್ಕೋಡಿ,<br><br>4. ಪುಂಡಲೀಕ ಅರ್ಜುನ ಯಕ್ಸಂಬೆ,<br>ವಯಸ್ಸುಃ 23 ವರ್ಷ, ಉಃ ಒಕ್ಕಲುತನ,<br>ವಾಸಃ ನನದಿವಾಡಿ, ತಾಃ ಚಿಕ್ಕೋಡಿ, |

ನಾನು ತೃಪ್ತಿ. ಧರಣಿ, ಬಿ.ಎ. ಎಲ್.ಎಲ್.ಎಂ., ಒಂದನೇಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂ. ಗಳ ನ್ಯಾಯಾಲಯ, ಚಿಕ್ಕೋಡಿ, ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

## ದೋಷಾರೋಪಣೆ

1) ಸದಲಗಾ ಪೊಲೀಸ್ ಠಾಣಾ ಹದ್ದಿಯಲ್ಲಿ ಬರುವ ನನದಿವಾಡಿ ಗ್ರಾಮದಲ್ಲಿರುವ ರುದ್ರಭೂಮಿಗೆ ಸಂಬಂಧಿಸಿದಂತೆ ಪಿರ್ಯಾದಿಯ ಕುಟುಂಬದವರಿಗೂ ಮತ್ತು 1 ರಿಂದ 4 ನೇ ಆರೋಪಿತರಾದ ನಿಮಗೂ ತಂಟೆ ತಕರಾರು ಇದ್ದು ಸದರಿ ತಂಟೇದ ವೈಮನಸ್ಸಿನಿಂದ, ದಿನಾಂಕ 18.03.2023 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ನನದಿವಾಡಿ ಗ್ರಾಮದ ಹದ್ದಿಯ ಬಾಳಾಸಾಹೇಬ ವಡ್ಡರ ಇವರ ಜಮೀನಿನ ಹತ್ತಿರ

ಯಕ್ತಂಬಾ-ಚಿಕ್ಕೋಡಿ ರಸ್ತೆಯ ಮೇಲೆ ಯಕ್ಸಂಬಾ ಕಡೆಗೆ ಚಾಸಾ-10 ಸಿದ್ದಪ್ಪ ಮಹಾದೇವ ನಾಯಿಕ ತನ್ನ ಹೀರೋ ಹೊಂಡಾ ಸ್ಪೆಂಡರ ಪ್ಲಸ್ ಮೋಟಾರ ಸೈಕಲ್ ನಂ.ಕೆಎ-23 ಇಎಸ್-6881 ನೇದ್ದರ ಮೇಲಿಂದ ಹೋಗುತ್ತಿದ್ದಾಗ, 1 ರಿಂದ 4 ನೇ ಆರೋಪಿತರಾದ ನೀವುಗಳು ಸೇರಿಕೊಂಡು, ಸಮಾನ ನಿಮ್ಮ ಉದ್ದೇಶ ಈಡೇರಿಕೆಯ ಸಲುವಾಗಿ, ಚಾಸಾ-10 ರವರನ್ನು ಅಡ್ಡಗಟ್ಟಿ ತರುಬಿದ್ದು, ಈ ಮೂಲಕ 1 ರಿಂದ 4 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

2) ಎರಡನೇಯದಾಗಿ, ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಈ ಮೇಲೆ ತಿಳಿಸಿದ ಸಮಾನ ನಿಮ್ಮ ಉದ್ದೇಶ ಈಡೇರಿಕೆಯ ಸಲುವಾಗಿ, 1 ರಿಂದ 4 ನೇ ಆರೋಪಿತರಾದ ನೀವುಗಳು ಚಾಸಾ-10 ರವರನ್ನು ಅಡ್ಡಗಟಿ ನಿಲ್ಲಿಸಿ ಊರಾಗ ನೀ ಯಾವ ಬಾಳ ದೊಡ್ಡ ಲೀಡರ ಆಗಿದಿ ಏನ ಬೊಸಡಿ ಮಗನ, ರಂಡಿ ಮಗನ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿದ್ದು, ಈ ಮೂಲಕ 1 ರಿಂದ 4 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

3) ಮೂರನೇಯದಾಗಿ, ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಈ ಮೇಲೆ ತಿಳಿಸಿದ ಸಮಾನ ನಿಮ್ಮ ಉದ್ದೇಶ ಈಡೇರಿಕೆಯ ಸಲುವಾಗಿ ತಂಟೆ ಮಾಡಿ, 1 ರಿಂದ 3 ನೇ ಆರೋಪಿತರಾದ ನೀವುಗಳು ಚಾಸಾ-10 ರವರಿಗೆ ಕೈಗಳಿಂದ ಮೈಮೇಲೆ ಹೊಡಿಬಡಿ ಮಾಡಿ, ಸ್ವಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

4) ನಾಲ್ಕನೇಯದಾಗಿ, ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಈ ಮೇಲೆ ತಿಳಿಸಿದ ಸಮಾನ ನಿಮ್ಮ ಉದ್ದೇಶ ಈಡೇರಿಕೆಯ ಸಲುವಾಗಿ ತಂಟೆ ಮಾಡಿ, 4 ನೇ ಆರೋಪಿಯಾದ ನೀವು ಕಬ್ಬಿಣದ ಸಳಿಯಿಂದ ಚಾಸಾ-10 ರವರ ತಲೆಗೆ ಬಡಿದು ಸಾದಾಗಾಯಪಡಿಸಿದ್ದು, ಈ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ

ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

5) ಕೊನೆಯದಾಗಿ, ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಈ ಮೇಲೆ ತಿಳಿಸಿದ ಸಮಾನ ನಿಮ್ಮ ಉದ್ದೇಶ ಈಡೇರಿಕೆಯ ಸಲುವಾಗಿ ತಂಟೆ ಮಾಡಿ, 1 ರಿಂದ 4 ನೇ ಆರೋಪಿತರಾದ ನೀವುಗಳು ಚಾಸಾ-10 ರವರಿಗೆ ರುದ್ರಭೂಮಿಗೆ ಹೋಗುವ ಹಾದಿಗೆ ಸಂಬಂಧಿಸಿದಂತೆ ಮತ್ತೆ ನೀ ಎಲ್ಲಿಯಾದರೂ ಲೀಡರಗಿರಿ ಮಾಡಿದರ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ?

ಪ್ರಶ್ನೆ-1) ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ ಆರೋಪಿ ನಂ.. 1ಃ

ಆರೋಪಿ ನಂ.. 2ಃ

ಆರೋಪಿ ನಂ.. 3ಃ

ಆರೋಪಿ ನಂ.. 4ಃ

ಪ್ರಶ್ನೆ-2) ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇಸನ್ನು ನಡೆಸುತ್ತೀರಾ?

ಉತ್ತರಃ ಆರೋಪಿ ನಂ.. 1ಃ

ಆರೋಪಿ ನಂ.. 2ಃ

ಆರೋಪಿ ನಂ.. 3ಃ

ಆರೋಪಿ ನಂ.. 4ಃ

(ಆಪಾದಿತರ ಹೇಳಿಕೆಗಳನ್ನು ನನ್ನ ಸಮ್ಮುಖದಲ್ಲಿ ಪಡದುಕೊಂಡಿದ್ದು ಸದರಿ ಹೇಳಿಕೆಗಳು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.)

1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.